ವ್ಯಾವಹಾರಿಕ  ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ  ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ.109/2021 ,

ಚಾಸಾ-2 ,  ಪ್ರಾಸಾ -2

| | |
|---|---|
| ಹೆಸರು | ಜಿತೇಂದ್ರ |
| ತಂದೆಯ ಹೆಸರು | ಅನಂತರಾಜು |
| ವಯಸ್ಸು | 52   ವರ್ಷ |
| ಕೆಲಸ | ವ್ಯಾಪಾರ |
| ವಾಸ | ಜೈನ್ ಪೇಟೆ, ಮೂಡಬಿದ್ರೆ |
| ಪ್ರಮಾಣೀಕರಿಸಿದ ದಿನಾಂಕ | 02-09-2025 |

ಮುಖ್ಯ ವಿಚಾರಣೆಃ  ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1.  ಮೃತ ಗ್ರೇಶನ್ ಲೆಲ್ಸಿ ರೋಡ್ರಿಗಸ್ ಮತ್ತು ಪ್ರವೀಣ್ ತಾವ್ರೋ ರವರು ಗೊತ್ತು . ಆರೋಪಿತರು ಗೊತ್ತಿಲ್ಲ . ಈ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ . ಪೊಲೀಸರ ಕೋರಿಕೆಯ ಮೇರೆಗೆ  ನಿಪಿ-11ಕ್ಕೆ ಪೊಲೀಸ್ ಠಾಣೆಯಲ್ಲಿ  ಸಹಿ ಮಾಡಿರುತ್ತೇನೆ .  ಸಾಕ್ಷಿ ನಿಪಿ-11 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ   ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು . ಸದರಿ ಸಮಯದಲ್ಲಿ ಯಾವುದೇ ಸ್ವತ್ತುಗಳನ್ನು  ಸ್ವಾಧೀನ ಪಡಿಸಿಕೊಂಡಿರುವುದಿಲ್ಲ.  ಮಹಜರನ್ನು ಯಾವ ದಿನ ಯಾರ ಸಮಕ್ಷಮದಲ್ಲಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ .

*(ಈ ಹಂತದಲ್ಲಿ ಸಾಕ್ಷಿಯನ್ನು  ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು  ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ  ಮಾನ್ಯ ಸ ಸ ಅ ರವರಿಂದಃ

ದಿಃ 28-03-2018 ರಂದು  ಚಾಸಾ-1 ರವರು ಠಾಣೆಗೆ ಕರೆ ಮಾಡಿ ಬರುವಂತೆ ತಿಳಿಸಿದ

ಮೇರೆಗೆ ನಾನು ಠಾಣೆಗೆ ಹೋದಾಗ , ನನ್ನ ಪರಿಚಯದ ಚಾಸಾ-3 ರವರು ಅಲ್ಲಿ ಇದ್ದರು ಎಂದರೆ ಸರಿಯಲ್ಲ . ನಮ್ಮಿಬ್ಬರಿಗೆ ಚಾಸಾ-1 ರವರು ಮಂಗಳೂರು ತಾಲೂಕು ಕರಿಂಜೆ ಗ್ರಾಮದ ಹರಿಹಂತ ಕಾಂಪೌಂಡ್ ನ ಅರಮನೆ ಸಂಕಪ್ಪ ಶೆಟ್ಟಿಯವರ ಗದ್ದೆಯಲ್ಲಿ ಕಾಡು ಪ್ರಾಣಿಗಳನ್ನು ..........................................................................................................

1ನೇ ಆರೋಪಿಯು ಬಿದಿರಿನ ದೊಂಟಿಯನ್ನು ತೋರಿಸಿ , ಸ್ವಾಧೀನ ಮಹಜರ್ ಕ್ರಮ ಜರುಗಿಸುವಾಗ ಸ್ಥಳದಲ್ಲಿಯೇ ಹಾಜರಿದ್ದು 12-15 ಗಂಟೆಯಿಂದ 12-45 ಗಂಟೆಯವರೆಗೆ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಮಾಡಲಾದ ಮಹಜರಿಗೆ ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಿ , ನನ್ನ ಹೇಳಿಕೆಯನ್ನು ನೀಡಿರುತ್ತೇನೆ . ಸಾಕ್ಷಿ ಹೇಳಿಕೆಯನ್ನು ಅಲ್ಲಗಳೆದ ಕಾರಣ ಹೇಳಿಕೆಯನ್ನು ನಿಪಿ-28 ಎಂದು ಗುರುತಿಸಲಾಯಿತು . ಮು.ಮಾ-13 ನ್ನು ಯಾವ ಕಾರಣಕ್ಕಾಗಿ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಪ್ರಕರಣದ ಬಗ್ಗೆ ತಿಳಿದಿದ್ದರೂ ಸಹ ಆರೋಪಿತರು ಊರಿನವರಾಗಿರುವ ಕಾರಣ , ಅವರೊಂದಿಗೆ ಸೇರಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀಸವಾಲುಃ ಆರೋಪಿಗಳ ಪರ ವಕೀಲರು ಪಾಟೀಸವಾಲು ಇಲ್ಲವೆಂದು ತಿಳಿಸಿರುತ್ತಾರೆ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ